ರಾಜಸ್ಥಾನದ ಬಾಡಮೇರಿಗೆ ಮೂವ್ ಆಯಿತು. ಅದು ಫೀಲ್ಡ್ ಏರಿಯ ಅನ್ನೋ ವರ್ಗೀಕರಣದಲ್ಲಿದ್ದದ್ದಕ್ಕೆ ಕುಟುಂಬ ಸಮೇತವಿರಲು ಯಾರಿಗೂ ಅನುಮತಿಯಿರಲಿಲ್ಲ. ಸೆಂಟ್ರಿ ಕೆಲಸ, ಮೆಂಟೆನೆನ್ಸ್ ಕೆಲಸ ಎಲ್ಲ ಮುಗಿಸಿ ರಾತ್ರಿ ಬ್ಯಾರಕ್ಕಿನಲ್ಲಿ ಚಾರಪಾಯಿ ಮೇಲೆ ಮಲಗಿದರೆ ಕಾಂತಾಳನ್ನು ಹೇಗೆಲ್ಲಾ ಮನಸಲ್ಲಿ ಚಿತ್ರಿಸಿಕೊಂಡು ಚಡಪಡಿಕೆಯೇಳುತ್ತಿತ್ತು! ಫೀಲ್ಡ್‌ಪೋಸ್ಟಾಫೀಸಿನ ಮೂಲಕ ಬರುವ ಪತ್ರಗಳಿಗೆ ಹಾತೊರೆದು, ಆಕಾಂಕ್ಷೆ ಚಡಪಡಿಕೆಗಳನ್ನು ಪರಸ್ಪರ ನಿವೇದಿಸುತ್ತ, ಊಹಾ ಮೈಥುನಕ್ಕೆಳೆದು ಸಂತಯಿಸುವ ರಾತ್ರಿಗಳು. ಸಹ ಸೈನಿಕರೊಂದಿಗಿನ ಸಂಭಾಷಣೆಗಳಲ್ಲಿ ಮಸಾಲೆ ಭರಿತ ಜೋಕುಗಳು ಸಹಜವಾಗಿ ಸಿಡಿದು ಆವಿಯಾಗುವ ಹಗಲುಗಳು. ವರ್ಷಕ್ಕೊಮ್ಮೆ ಸಿಗುವ ಎರಡು ತಿಂಗಳ ರಜೆಗೆ ಮನಸ್ಸು ರೆಕ್ಕೆಬಿಚ್ಚಿ ಚಾತಕವಾಗಿ ಕುಳಿತಿರುತ್ತದೆ. ಮಗ ರಂಗನಾಥ ಹುಟ್ಟಿದಾಗ ಅವರಿಗೆ ಊರಿಗೆ ಬರಲಾಗಲಿಲ್ಲ. ರೆಜಿಮೆಂಟು ಆಗ ಮರುಭೂಮಿಯಲ್ಲಿ ಎಕ್ಸರಸೈಜು ಅನ್ನೋ ಅಣಕು ಯುದ್ಧ ತರಬೇತಿಯಲ್ಲಿತ್ತು. ಆರುತಿಂಗಳ ನಂತರವೇ ನೋಡಿದ್ದು. ಕ್ಯಾಂಟೀನಿನಿಂದ ಕುಕ್ಕರು, ಟ್ರಾನ್ಸಿಸ್ಟರು ಏನೆಲ್ಲ ಹೊತ್ತು ತಂದಿದ್ದರು. ಒಂದಿಡೀ ವರ್ಷದ ಖಾಲಿತನವನ್ನು ಅರುವತ್ತು ದಿನಗಳಲ್ಲಿ ಕಾಯಿಸಿ, ಭಟ್ಟಿಯಿಳಿಸಿ ಸಾರ ತೆಗೆದು ಶೃಂಗರಿಸುವ ಹುಚ್ಚುಬಯಕೆ. ಇವರು ಬಂದರೆ ಗೆಳೆಯರು, ಪರಿಚಿತರಿಗೆಲ್ಲ ಸಂಭ್ರಮವೋ ಸಂಭ್ರಮ! ಹೊಲಗಳಲ್ಲಿ, ಗುಡ್ಡದ ಬಂಡೆಗಳೆಡೆಯಲ್ಲಿ ಪಾನಗೋಷ್ಠಿಯಲ್ಲಿ ಮಿಲಿಟರಿಮಾಲು ಎಂಬ ಹೆಗ್ಗಳಿಕೆಯ ಬಾಟಲುಗಳು ಮುದ ಕೊಡುತ್ತವೆ. ದಿನಾ ಮನೆಯಲ್ಲಿ ಭೆಟ್ಟಿಯಾಗಲು ಒಬ್ಬರಲ್ಲ ಒಬ್ಬರು ಬರುತ್ತಿದ್ದರು. 'ನರಸಾ... ಬರೋದೇ ವರ್ಷಕ್ಕೊಮ್ಮೆ, ಆಗ್ಲಾದರು ಮನೇಲಿ ಉಂಡು ಬೇಗ ಮಲಗಬಾರ್ದೇನೋ?' ಅಮ್ಮನ ಕಳಕಳಿ ಅರ್ಥವಾಗದ್ದಲ್ಲ. 'ಕಾಂತಮ್ಮಾ... ಉಳಿದದ್ದು ನಾ ನೋಡ್ಕಾತೀನಂತೆ, ನೀ ಮಲಕೋ ಹೋಗು...' ಸೊಸೆಯನ್ನು ಆತುರಮಾಡಿ ಕೋಣೆಗೆ ಕಳಿಸುವ ಮಾತಿನ ಹಿಂದಿರುವ ಸಂಸಾರಜ್ಞಾನ ತಮಗರ್ಥವಾಗುತ್ತಿತ್ತು. ಅತ್ತೆಯ ಇಂಗಿತಕ್ಕೆ ಸಣ್ಣಕೆ ಕೆಂಪೇರಿ ಕೋಣೆಯೊಳಗೆ ಕಾಲಿರಿಸುವ ಕಾಂತಾ ತಾವು ಇಷ್ಟೆಲ್ಲಾ ದಿನ ವಂಚಿತರಾಗಿದ್ದ ಜೀವ ರಹಸ್ಯಗಳ ಪ್ರತೀಕವಾಗಿ ಕಾಣುತ್ತಿದ್ದಳು. ಮುಂಗಾರಿನ ಕೊಬ್ಬಿದ ಮೋಡಗಳು ಕರಗಿ ಸುರಿದು, ಕಾಯ್ದು ಬಾಯ್ಬಿಟ್ಟುಕೊಂಡಿರುವ ಬಂಡೆಗಳು ಒದ್ದೆಯಾಗಿ ಒಸರುವ ಸೆಲೆಗಳು ಮಣ್ಣಿಗಿಳಿಯುತ್ತಾ, ಮೊಳಕೆಯೊಡೆಸುವ ಉನ್ಮಾದಕ್ಕೆ ಕಾರಣವಾಗುವ ಈ ಪರಿಗೆ ತಾವು ಸದಾಕಾಲ ಇಲ್ಲಿಯೇ ಇದ್ದರೂ ಹೀಗೇ ಸಂಭ್ರಮಿಸುತ್ತಿದ್ದೆನಾ ಎಂಬ ಪ್ರಶ್ನೆ ಮೂಡುತ್ತ ಮುಳುಗಿಹೋಗುತ್ತದೆ. ಈ ಕ್ಷಣವೇ ಕೊನೆ ಎಂಬ ಹಪಾಹಪಿಯಲ್ಲಿ, ಮೃದುತ್ವದಲ್ಲಿ ಕಠಿಣವಾಗುತ್ತ, ಕಾಠಿಣ್ಯ ನಿರ್ಲಜ್ಜವಾಗುವ ಮುದದಲ್ಲಿ, ಅಬ್ಬರಿಸಿ ಬೇರೆ ಬೇರೆ ಲಯಗಳು ಏಕೀಭವಿಸಿ, ಜಲಪಾತದ ನಂತರ ಪ್ರಶಾಂತವಾಗಿ ಹರಿಯುವ ತೊರೆಯಂತೆ ಆವರಿಸಿಕೊಳ್ಳುವ ಕತ್ತಲು. ರೆಜಿಮೆಂಟಿಂದ ನೇಮಕಗೊಂಡು ಮ್ಯಾಪ್‌ರೀಡಿಂಗ್ ಕಲಿಯುವಾಗ ನಕಾಶೆಯಲ್ಲಿರುವ ಸಂಕೇತಗಳ ಮೇಲೆ ಸ್ಥಳ ಗುರುತಿಸುತ್ತಾ ಕಾಡಿನಲ್ಲಿ ದಾರಿ ತಪ್ಪಿಹೋಗಿ, ಅಪರಿಚಿತ ಹಳ್ಳಿಯ ಹೆಂಗಸರಷ್ಟೇ ಇರುವ ಮನೆಯೊಂದರ ಹಿಂದೆ ಅಚಾನಕ್ಕಾಗಿ ಸೇರಿಬಿಟ್ಟು ಗದ್ದಲವಾಗಿ, ಹೇಗೋ ಯೂನಿಟ್ಟಿಗೆ ಮರಳಿ ಬಂದದ್ದು, ಅದಕ್ಕೆ ಸಿಕ್ಕ ಶಿಕ್ಷೆ ನೆನಪಾಗಿ ಮುಗುಳ್ನಗೆ ಬಂತು. ಮ್ಯಾಪ್‌ರೀಡಿಂಗ್ ಮತ್ತು ಕೇಡರ್ ಪರೀಕ್ಷೆ ಪಾಸಾಗಿ ಹವಾಲ್ದಾರ ಆಗಿ ಬಡ್ತಿಯಾಗಿ ತೋಳ ಮೇಲೆ ಮೂರು ಬಿಳಿಪಟ್ಟಿಗಳು ಬಂದವು. ಅದಾದ ಮೇಲೆ ಮಗಳು ಶ್ರಾವಣಿ ಹುಟ್ಟಿದ್ದು. ಊರಿಗೆ ಹೋಗಲೇಬೇಕು ಎಂಬಾಸೆಯಲ್ಲಿ ಬೇಡಿಕೆಯಿಟ್ಟರೆ ಆಫೀಸರ್ ಕಮಾಂಡಿಂಗ್, ಖಡಕ್ ಮನುಷ್ಯ, ಕ್ಯಾಪ್ಟನ್